ಸುತ್ತಾ ಕಣ್ಣಾಡಿಸಿ, "ನಿನ್ನ ಕೆಲಸ, ಸಂಬಳ ಚೆನ್ನಾಗಿದೆ ಎನಿಸುತ್ತೆ" ಎಂದ.

ಸಂಜನಾ ವಿಚಲಿತಳಾದಳು. ಅಂದರೆ ಶಶಿಧರ ನಮ್ಮೊಂದಿಗೆ ಉಳಿದುಕೊಳ್ಳಲು ಬಂದಿಲ್ಲ. ತನ್ನನ್ನು ಮಾತನಾಡಿಸಿಕೊಂಡು ಹೋಗಲಷ್ಟೆ ಬಂದನಾ? ಅಥವಾ ಮಗಳನ್ನು ನೋಡಿಕೊಂಡು ಹೋಗಲು ಬಂದನಾ?

ಪುನಃ ಶಶಿಧರನೇ ಕೇಳಿದ, "ನೀನು ಬೆಂಗಳೂರಿಗೆ ಯಾವಾಗ ಬಂದೆ?"

"ನೀನು ನಮ್ಮನ್ನು ಬಿಟ್ಟು ಹೋದಮೇಲೆ, ನನ್ನ ಅಪ್ಪ ಅಮ್ಮ, ಅಣ್ಣ ನನಗೆ ಆಶ್ರಯಕೊಡಲು ಒಪ್ಪಲಿಲ್ಲ. ಇನ್ನು ದಾವಣಗೆರೆಯಲ್ಲಿ ಇದ್ದು ಬದುಕುವುದು ಕಷ್ಟ ಅನಿಸಿತು. ಬೆಂಗಳೂರಿಗೆ ಬಂದೆ. ಸ್ನೇಹಿತೆ ಸಹಾಯ ಮಾಡಿದಳು. ನನ್ನ ಕಾಲ ಮೇಲೆ ನಿಲ್ಲುವಂತಾಯ್ತು" ಎಂದು ಅವನಿಗೆ ಚುಚ್ಚುವಂತೆ ಹೇಳಿದಳು.

ಆದರೆ ಶಶಿಧರ ಅದಕ್ಕೆ ಸ್ಪಂದಿಸದೇ, "ನಿನ್ನನ್ನು ಹುಡುಕಿಕೊಂಡು ದಾವಣಗೆರೆಗೆ ಹೋದೆ. ನಾವಿದ್ದ ಮನೆಯನ್ನು ನೀನು ಖಾಲಿಮಾಡಿರುವುದು ತಿಳಿದು ನಿಮ್ಮ ಮನೆಗೆ ಹೋದೆ. ನಿನ್ನ ಅಪ್ಪ, ಅಣ್ಣ ನನ್ನ ಮೇಲೆ ಕೈ ಮಾಡಿದರು. ನಂತರ ಎರಡು ತಿಂಗಳುಗಳ ಕಾಲ ಸಿಕ್ಕ ಸಿಕ್ಕವರ ಬಳಿ ನಿನ್ನ ಬಗ್ಗೆ ವಿಚಾರಿಸಿದೆ. ಕಡೆಗೆ ನಿನ್ನ ಸ್ನೇಹಿತೆ ವಸಂತಳಿಂದ ನಿನ್ನ ಮೊಬೈಲ್ ನಂಬರ್ ಸಿಕ್ಕಿತು."

ವಸಂತ ಸುಮಾರು ಐದಾರು ತಿಂಗಳು ಕೆಳಗೆ ರಾಜಾಜಿನಗರದಲ್ಲಿ ಸಿಕ್ಕಿದ್ದಳು. ಅವಳ ಅಣ್ಣನ ಮನೆ ಅಲ್ಲೇ ಇದೆ ಎಂದಿದ್ದಳು. ನಂಬರ್ ಪರಸ್ಪರ ಬದಲಾಯಿಸಿಕೊಂಡಿದ್ದೆವು. ವಸಂತ ತನಗೆ ಸಿಕ್ಕಿದ್ದು ಒಳ್ಳೆಯದೆ ಆಯಿತು.

"ಶಶಿ ನೀನು ಮತ್ತೆ ಹಿಂತಿರುಗಿ ಬಂದದ್ದು ನನಗೆ ಯಾವ ರೀತಿಯಲ್ಲಿ ಸಂಭ್ರಮಿಸಬೇಕು ಅಂತಾನೇ ತಿಳಿಯುತ್ತಿಲ್ಲ. ನನಗಂತೂ ಜೀವನದಲ್ಲಿ ಆಸಕ್ತಿಯೇ ಇಲ್ಲದಂತಾಗಿತ್ತು. ಕೇವಲ ಚಂದನಾಳಿಗಾಗಿ ಎಲ್ಲವನ್ನೂ ಸಹಿಸಿಕೊಂಡಿದ್ದೇನೆ. ಹಿಂದೆ ನಡೆದದ್ದನ್ನು ಒಂದು ಕೆಟ್ಟ ಕನಸು ಎಂದುಕೊಂಡು ಮರೆತುಬಿಡೋಣ. ನಮ್ಮಿಬ್ಬರ ಮುಂದೆ ಇನ್ನೂ ವಿಶಾಲವಾದ ಜಗತ್ತಿದೆ."

ಶಶಿಧರ ಅವಳ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಅವಳನ್ನೇ ಕೌತುಕದಿಂದ ನೋಡಿದ. ಅವಳ ಮುಖದಲ್ಲಿ ಹೊಸ ಉತ್ಸಾಹ ಮೂಡಿರುವುದು ಕಾಣಿಸುತ್ತಿತ್ತು. ತಕ್ಷಣ ಏನು ಪ್ರತಿಕ್ರಿಯಿಸಬೇಕೆಂದು ತಿಳಿಯದೆ, ಗೊಂದಲಕ್ಕೊಳಗಾದ. ಎಡಗೈಯಿಂದ ಹಣೆಯನ್ನು ಒತ್ತಿಕೊಂಡು ತಲೆ ಬಗ್ಗಿಸಿಕೊಂಡು ಕೇಳಿದ:

"ಸಂಜನಾ ನಿನ್ನಿಂದ ನನಗೊಂದು ಸಹಾಯ ಆಗಬೇಕಿದೆ. ಅದಕ್ಕಾಗಿ ಹುಡುಕಿಕೊಂಡು ಬಂದೆ."

"ಸಹಾಯ!" ಹುಬ್ಬು ಹಾರಿಸಿದಳು.

ಶಶಿಧರ ಬ್ಯಾಗಿನಿಂದ ನಾಲ್ಕೈದು ಪತ್ರಗಳನ್ನು ಹೊರತೆಗೆದು, "ದಯವಿಟ್ಟು ಇದಕ್ಕೆ ಸಹಿ ಮಾಡಿ ಕೊಡು" ಎನ್ನುತ್ತಾ ಅವಳ ಮುಂದೆ ಹಿಡಿದ.

"ಏನವು?" ಈಗ ಸಂಜನಾಳಿಗೆ ಪರಿಸ್ಥಿತಿ ಗೊಂದಲಮಯವಾಗಿತ್ತು.

"ಇವು..." ಅವಳ ದೃಷ್ಟಿ ಎದುರಿಸಲಾರದೆ ತಲೆ ತಗ್ಗಿಸಿತ್ತಾ ಹೇಳಿದ, "ವಿಚ್ಛೇದನ ಪತ್ರಗಳು."

ವಿದ್ಯುತ್ ಆಘಾತಕ್ಕೆ ಒಳಗಾದವಳಂತೆ ನಿಂತುಬಿಟ್ಟಳು ಸಂಜನಾ. ಮೈಯಲ್ಲಿ ಶಕ್ತಿ ಇಂಗಿಹೋದಂತಾಗಿ ಕುರ್ಚಿಯ ಮೇಲೆ ಕುಸಿದಳು.

ಅಲ್ಲಿ ಐದು ನಿಮಿಷ ನೀರವ ಮೌನ ತುಂಬಿಕೊಂಡಿತು. ಸುಧಾರಿಸಿಕೊಂಡು ಮೆಲ್ಲಗೆ ಕೇಳಿದಳು:

"ವಿಚ್ಛೇದನ!?"

"ಹೌದು. ನಾನು ಬಂದದ್ದು ಈ ಉದ್ದೇಶಕ್ಕೆ. ವಿಚ್ಛೇದನ ಪತ್ರಕ್ಕೆ ನಿನ್ನಿಂದ ಸಹಿ